# ಹೊಸ ವಿನ್ಯಾಸದ ನಿರೀಕ್ಷೆಯಲ್ಲಿ..

ಕಾಲ ಕಾಲಕ್ಕೆ ಕೂದಲ ವಿನ್ಯಾಸ ಬದಲಿಸಿಕೊಂಡು ಹೊಸ ಹೊಸ ಕೇಶಶೈಲಿಗೆ ಮಾರು ಹೋಗುವುದು ಫ್ಯಾಷನ್‌ಪ್ರಿಯರ ಹವ್ಯಾಸ. ಆದರೆ ಕೆಲವರು ಒಂದೇ ರೀತಿಯ ಕೇಶಶೈಲಿಯನ್ನು ಸದಾ ಉಳಿಸಿಕೊಂಡಿರುತ್ತಾರೆ. ಆದರೆ ಫ್ಯಾಷನ್‌ಪ್ರಿಯರಿಗೆ ಇದು ಸಾಧ್ಯವಿಲ್ಲದ ಮಾತು. ಪ್ರತಿ ಬಾರಿ ಹೇರ್‌ಟ್ರಿಮ್ ಮಾಡುವಾಗಲೂ ಪಾರ್ಲರ್ ಒಡತಿಗೆ ಕೇಳುವ ಪ್ರಶ್ನೆ, 'ಹೊಸ ಹೇರ್‌ಸ್ಟೈಲ್ ಯಾವುದಿದೆಯೋ ಅದನ್ನೇ ಮಾಡಿ' ಎಂದು.

ಹೊಸ ರೀತಿಯ ಕೇಶವಿನ್ಯಾಸ ಮಾಡಿಸಿಕೊಳ್ಳಬೇಕು ಎಂಬುದನ್ನು ಫ್ಯಾಷನ್‌ಪ್ರಿಯ ಯುವತಿಯರು ಪ್ಲ್ಯಾನ್ ಮಾಡುತ್ತಾರೆ. ಕೇಶ ವಿನ್ಯಾಸಗಾರರು ಕೂಡ ಹೊಸ ಬಗೆಯ, ಫ್ಯಾಷನಬಲ್ ಆಗಿ ಕಾಣುವ ಕೇಶ ವಿನ್ಯಾಸ ಮಾಡಲು ಸಾಕಷ್ಟು ಅಧ್ಯಯನ, ತಯಾರಿ ನಡೆಸುತ್ತಲೇ ಇದ್ದಾರೆ. ಕೆಲವು ಮಹಿಳೆಯರು ಸಿನಿಮಾ ನಟಿಯರ ಕೇಶ ಶೈಲಿಯನ್ನೇ ಅನುಕರಿಸುತ್ತಾರೆ. ಅವರಂತೆ ತಾವೂ ಕಾಣಬೇಕು ಎಂಬ ತುಡಿತ ಇಲ್ಲಿ ಎದ್ದು ಕಾಣುತ್ತದೆ.

ಫ್ಯಾಷನ್ ಶೋಗಳಲ್ಲಿ ಕ್ಯಾಟ್ ವಾಕ್ ಮಾಡುವ ಮಾಡೆಲ್‌ಗಳು ತರಹೇವಾರಿ ವಿನ್ಯಾಸದ ಕೇಶ ಶೈಲಿಯನ್ನು ಮಾಡಿಸಿಕೊಂಡಿರುತ್ತಾರೆ. ರೂಪ, ನೋಟ, ಒಡವೆ, ಉಡುಪುಗಳಷ್ಟೇ ಕೇಶ ವಿನ್ಯಾಸಕ್ಕೂ ಅಲ್ಲಿ ಆದ್ಯತೆ ನೀಡಲಾಗುತ್ತದೆ. ಮಾಡೆಲ್‌ಗಳ ಕೇಶರಾಶಿ ಕ್ಯಾಟ್‌ವಾಕ್ ಮಾಡುವಾಗ ನೋಡುಗರ ಗಮನಸೆಳೆಯುವ ಕಾರಣ ವಿನ್ಯಾಸಕ್ಕೂ ವಿಶೇಷ ಮುತುವರ್ಜಿ ವಹಿಸಿರುತ್ತಾರೆ.







ಪದ್ಧತಿ ಇದೆ. ರಿಚ್ ಲುಕ್ ಕೊಡುವ ಟಯರಾಗಳು ಲೂಸ್ ಹೇರ್, ಪೋನಿ ಟೈಲ್, ಜಡೆ ಎಲ್ಲ ಬಗೆಯ ಹೇರ್ ಸ್ಟೈಲ್‌ಗಳಿಗೆ ಸೂಕ್ತವಾಗಿದೆ.

## ಮುಂದಲೆ ಪಟ್ಟಿ

ಹಣೆಯ ಮೇಲ್ಭಾಗದಲ್ಲಿ ಹೊಂದಿಸಿ ಎರಡೂ ಕಿವಿಗಳಿಗೆ ಕಟ್ಟುವ ಸಾಂಪ್ರದಾಯಿಕ ಆಭರಣ ಇದು. ಓಲ್ಡ್ ಈಸ್ ಗೋಲ್ಡ್ ಎನ್ನುವ ಮಾತಿನಂತೆ ಭರತನಾಟ್ಯ, ಯಕ್ಷಗಾನಗಳಲ್ಲಿ ಬಳಕೆಯಿದ್ದ ಈ ಮುಂದಲೆ ಪಟ್ಟಿ ಮದುವೆ ಫಂಕ್ಷನ್‌ಗಳಲ್ಲಿ ವಧುವಿನ ಶೃಂಗಾರದ ಒಡವೆಯಾಗಿ ಬಳಕೆಯಲ್ಲಿದೆ. ಮಧ್ಯದಲ್ಲಿ ಚಂದದ ಹರಳಿನ ಅಥವಾ ಬಂಗಾರದ ಪೆಂಡೆಂಟ್ ಇದ್ದು ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಚೈನ್ ಹೊಂದಿರುತ್ತದೆ. ಒಂದೆಳೆ ಅಥವಾ ನಾಲ್ಕಾರು ಎಳೆಯ ಚೈನ್‌ಗಳು ಮುಖದ ಅಂದ ಇಮ್ಮಡಿಗೊಳಿಸುತ್ತವೆ.

## ಡೆಕೊರೇಟೆಡ್ ಜಡೆ

ಸಾಂಪ್ರದಾಯಿಕ ಶೈಲಿಯ ರೇಷ್ಮೆ ಸೀರೆಗಳಿಗೆ ಉದ್ದದ ಜಡೆಯನ್ನು ಎಲ್ಲರೂ ಇಷ್ಟಪಡುತ್ತಾರೆ. ಜಡೆಗಳ ಶೃಂಗಾರಕ್ಕೆಂದೇ ಜಡೆಬಿಲ್ಲೆಗಳು, ಹೂವು, ಮುತ್ತು, ಲೇಸ್, ಹರಳು, ಮುತ್ತುಗಳಿಂದ ತಯಾರಾದ ಡೆಕೊರೇಟೆಡ್ ಜಡೆಗಳು ಶಾಪಿಂಗ್ ಸೆಂಟರ್‌ಗಳಲ್ಲಿ ರಾರಾಜಿಸುತ್ತವೆ. ಜಡೆ ಹೆಣೆದ ನಂತರ ಮಧ್ಯದಲ್ಲಿ ಒಂದೊಂದು ಬಂಗಾರದ ಬಣ್ಣದ ಬಿಲ್ಲೆಗಳನ್ನು ಇಟ್ಟು ಅಲಂಕಾರ ಮಾಡಬಹುದು. ವಧು ಧರಿಸುವ ಜಡೆಯನ್ನು ಜ್ಯುವೆಲ್ಡ್ ಬ್ರೈಡ್ ಎನ್ನುವರು. ಅರಿಶಿನ ಶಾಸ್ತ್ರ, ಮೆಹೆಂದಿ ಕಾರ್ಯಕ್ರಮಗಳಿಗಾಗಿಯೇ ನೈಸರ್ಗಿಕ ಸುಂದರ ಹೂವಿನ ಜಡೆಗಳು ಲಭ್ಯವಿವೆ. ಮಲ್ಲಿಗೆ, ಸುಗಂಧರಾಜ, ಗುಲಾಬಿ, ಸೇವಂತಿಗೆ ಹೂವಿನ ಜಡೆಗಳು ಎವರ್‌ಗ್ರೀನ್ ಟ್ರೆಂಡ್ ಎನಿಸಿವೆ.

## ಬೈತಲೆ ಬೊಟ್ಟು

ನೆತ್ತಿಯ ಗುಂಟ ಚೈನ್ ಇಟ್ಟು ಹಣೆಯ ಮಧ್ಯ ಪದಕ ಬರುವಂತೆ ಕಾಣುವ ಬೈತಲೆ ಬೊಟ್ಟು ಎಲ್ಲ ವಯಸ್ಸಿನ ಮಹಿಳೆಯರ ಅಚ್ಚುಮೆಚ್ಚು. ಸಿಲ್ವರ್ ಗೋಲ್ಡ್, ಪರ್ಲ್, ಕುಂದನ್, ಗೋಲ್ಡ್ ಪ್ಲೇಟೆಡ್, ಆಕ್ಸಿಡೈಸ್ಡ್ ಎಲ್ಲ ವಿಧಗಳಲ್ಲಿಯೂ ದೊರೆಯುತ್ತಿದ್ದು ಬಜೆಟ್ ಫ್ರೆಂಡ್ಲಿ ಎನಿಸಿವೆ. ಚಿಕ್ಕ ಮಕ್ಕಳಿಗಾದರೆ ಹರಳಿನ ಬೊಟ್ಟು ಚಂದ. ಸೀರೆ ಉಟ್ಟ ಟೀನೇಜ್ ಹುಡುಗಿಯರು ಆಕ್ಸಿಡೈಸ್ಡ್, ಪರ್ಲ್ ಬೈತಲೆ ಬೊಟ್ಟು ಇಷ್ಟಪಟ್ಟರೆ ಮದುಮಗಳಿಗಾಗಿಯೇ ಚಿನ್ನ, ವಜ್ರದ ದುಬಾರಿ ಬೈತಲೆ ಬೊಟ್ಟುಗಳು ಸಂಪ್ರದಾಯ ಸಂಸ್ಕೃತಿಗಳ ಸಂಕೇತವಾಗಿ ರಾರಾಜಿಸುತ್ತವೆ.

ನೀವು ಧರಿಸುವ ಬಟ್ಟೆಗಳಿಗೆ ಸೂಕ್ತ ಎನಿಸುವ ಹೇರ್ ಆ್ಯಕ್ಸೆಸರೀಸ್ ಧರಿಸಿ. ಸಾಂಪ್ರದಾಯಿಕ ಶೈಲಿಯ ಸೀರೆ, ಲೆಹೆಂಗಾ, ಗಾಗ್ರಾ ಚೋಲಿ, ಸಲ್ವಾರ್ ಕಮೀಜ್ ಜೊತೆಗೆ ಇಲ್ಲಿ ಎಲ್ಲ ಆಭರಣಗಳು ಚಂದ ಕಾಣುತ್ತವೆ. ಆದರೆ ನೀವು ಮಾಡರ್ನ್ ಡ್ರೆಸ್ ಧರಿಸುವಿರಾದರೆ ಇಂತಹ ಕೇಶಾಭರಣಗಳನ್ನು ಧರಿಸಬಾರದು. ಬದಲಾಗಿ ಬೋ, ಹೇರ್ ಸ್ಟಿಕ್, ಹೇರ್ ಕ್ಲಿಪ್, ಹೇರ್ ಬ್ಯಾಂಡ್ ಆಯ್ಕೆ ಮಾಡಿಕೊಳ್ಳಿ. ■